**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 1394/2021**

**ಪ್ರಾಸಾಃ- 1 ಚಾಸಾಃ- 1**

| | | |
|---|---|---|
| ಸಾಕ್ಷಿಯ ಹೆಸರು | : | ಟಿ. ಅನಿಲ್ ಕುಮಾರ್ |
| ತಂದೆಯ ಹೆಸರು | : | ಟಿ. ನಾಗರಾಜ್ |
| ವಯಸ್ಸು | : | 25 ವರ್ಷ |
| ವೃತ್ತಿ | : | ವಿದ್ಯಾರ್ಥಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 22.8.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ನನಗೆ ಚಾಸಾ 2 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ 6 ನನ್ನ ಚಿಕ್ಕಪ್ಪ. ಚಾಸಾ 8 ನನ್ನ ಅಣ್ಣ. ಚಾಸಾ 7, 9 ರಿಂದ 12 ರವರು ನನ್ನ ಸ್ನೇಹಿತರು. ಆರೋಪಿತರ ಪರಿಚಯ ಇರುತ್ತದೆ. ನಾವು ವಾಲ್ಮೀಕಿ ಜನಾಂಗದವರು. ಆರೋಪಿತರಲ್ಲಿ 1 ಮತ್ತು 2 ನೇ ಆರೋಪಿತರು ಮುಸ್ಲಿಂ ಜನಾಂಗದವರು. 3 ಮತ್ತು 4 ನೇ ಆರೋಪಿತರು ವಾಲ್ಮೀಕಿ ಜನಾಂಗದವರು.

2. ದಿಃ 10-9-2021 ರಂದು ನಾವು ಬನ್ನಿ ಮಹಾಂಕಾಳಮ್ಮ ಪಾರ್ಕ್ ಬಳ್ಳಾರಿಯಲ್ಲಿ ಗಣಪತಿ ಪ್ರತಿಷ್ಟಾಪನೆ ಮಾಡಿದ್ದೆವು. ದಿಃ 12-9-2021 ರಂದು ನಮ್ಮ ಪಾರ್ಕ್ ನಲ್ಲಿ ಅನ್ನದಾನ ವ್ಯವಸ್ದೆ ಮಾಡಿದ್ದೆವು. ನಮ್ಮ ಕಾರ್ಯಕ್ರಮ ಎಲ್ಲಾ ಮುಗಿಸುತ್ತಿದ್ದೆವು ಆಗ ನಮ್ಮ ಪಕ್ಕದ ಏರಿಯಾದಲ್ಲಿ ಕೌಶಿಕ್ ಎನ್ನುವವನು ಎಲ್ಲರೂ ಸೇರಿ ಗಣಪತಿ ಪ್ರತಿಷ್ಟಾಪನೆ ಮಾಡಿದ್ದರು. ಸದರಿ ಕೌಶಿಕ್ ರವರ ಗಣಪತಿಯನ್ನು ಕಾಲುವೆಯಲ್ಲಿ ಬಿಟ್ಟು ರಾತ್ರಿ 10-00 ಗಂಟೆಗೆ ಅವರು ಮರಳಿ ನಾವು ಕುಳಿಸಿರುವ ಗಣಪತಿ ಹತ್ತಿರ ಬಂದರು. ಆಗ ನಾವು ಹೇಳಿದ ಓಣಿಯಲ್ಲಿ ಗಣಪತಿ ಯನ್ನು ತೆಗೆದುಕೊಂಡಿಲ್ಲ ಎಂದು ಕೌಶಿಕ್ ಗೆ ಅಬ್ದುಲ್ ನು ಒಂದು ಏಟು ಹೊಡೆದನು. ಆಗ ಚಾಸಾ 8 ರವರು ಯಾಕೆ ಗಲಾಟೆ

ಮಾಡುತ್ತೀಯ ಎಂದು ಸದರಿ ಆರೋಪಿಯನ್ನು ಕೇಳಿದನು. ಆಗ ಚಾಸಾ 8 ರವರಿಗೆ ಸದರಿ ಆರೋಪಿಯು ಏನಲೇ ವಾಲ್ಮೀಕಿ ಸೂಳೆ ಮಕ್ಕಳೇ ನಿಮ್ಮದು ಹೆಚ್ಚಾಗಿದೆ ಎಂದು ಬೈದನು. ಆಗ ನಾನು ಏಕೆ ಕೆಟ್ಟದಾಗಿ ಬೈಯುತ್ತೀಯಾ ಎಂದು ಸದರಿ ಅಬ್ದುಲ್‌ನು ಕೇಳಿದೆನು. ಆಗ ನಿಮಗೆಲ್ಲಾ ಒಂದು ಗತಿ ಕಾಣಿಸುತ್ತೇವೆ ಎಂದು ಅಬ್ದುಲ್ ಮತ್ತು ಗಜಿನಿ ಅಲ್ಲಿಂದ ಹೋದರು.

3. ಹತ್ತು ನಿಮಿಷಗಳ ನಂತರ ಸದರ ಅಬ್ದುಲ್‌ನು ಗಜಿನಿ, ಗುಡದೂರು ವಿರೇಶ್, ಸಿದ್ದ ಇವರನ್ನು ಕರೆದುಕೊಂಡು ಟಾಟಾ ಎ ಸಿಯಲ್ಲಿ ಬಂದನು. ಸದರಿ ಟಾಟಾ ಎಸಿ ನಂಃ ಕೆಎ 34-ಎ 2341 ಆಗಿತ್ತು. ಸದರಿ ಆರೋಪಿತರು ಕಟ್ಟಿಗೆಗಳನ್ನು ತೆಗೆದುಕೊಂಡು ಬಂದಿದ್ದು ನಮ್ಮನ್ನು ಕೊಲೆ ಮಾಡುತ್ತೇನೆ ಎಂದು ಹೇಳಿದರು. ಕಟ್ಟಿಗೆಯಿಂದ ನನ್ನನ್ನು 1 ನೇ ಆರೋಪಿಯು ನನ್ನ ತಲೆಗೆ ಹೊಡೆಯಲು ಬಂದಾಗ ನಾನು ಹಿಂದೆ ಸರಿದೆನು, ಆಗ ಏಟು ನನ್ನ ಎಡಗಣ್ಣಿನ ಹುಬ್ಬಿಗೆ ಬಡಿಯಿತು. ನಂತರ ಸದರಿ ಗಲಾಟೆ ಬಿಡಿಸಲು ಬಂದ ಚಾಸಾ 6 ರವರಿಗೆ 2 ನೇ ಆರೋಪಿ ಗಜಿನಿಯು ಬಲಗಣ್ಣಿನ ಹುಬ್ಬಿಗೆ ಕಟ್ಟಿಗೆಯಿಂದ ಹೊಡೆದನು. ಆಗ ಚಾಸಾ 7 ರಿಂದ 12 ರವರು ಗಲಾಟೆ ಬಿಡಿಸಲು ಬಂದರು. ನಂತರ ನನ್ನನ್ನು ಮತ್ತು ಚಾಸಾ 6 ರವರನ್ನು ನಮ್ಮ ಸ್ನೇಹಿತರು ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ದೂರು ದಾಖಲಿಸಲು ಪೋಲೀಸ್ ಠಾಣೆಗೆ ಹೋದಾಗ ರಾತ್ರಿ 10-40 ಆಗಿದ್ದು ಪೋಲೀಸರು ಬೆಳಿಗ್ಗೆ ಬರುವಂತೆ ಹೇಳಿದರು.

4. ದಿಃ 13-9-2021 ರಂದು ಬೆಳಿಗ್ಗೆ 11-00 ಗಂಟೆಗೆ ದೂರು ಕೊಡಲು ಹೋದೆವು. ವಿಮ್ಸ್ ಆಸ್ಪತ್ರೆಯಲ್ಲೂ ಸಹ ಆರೋಪಿತರು ಬಂದು ನಮ್ಮನ್ನು ವಾಲ್ಮೀಕಿ ಸೂಳೆ ಮಕ್ಕಳೇ ಈ ದಿನ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಹೇಳಿದರು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ 4-30 ರ ಸುಮಾರಿಗೆ ತನಿಖಾಧಿಕಾರಿಯವರು ಪಂಚನಾಮೆ ಮಾಡಲು ಬಂದಾಗ ಸಂಜೆ4-30 ರಿಂದ 6-00 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿಪಂಚನಾಮೆ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ

ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸ್ಥಳದಲ್ಲಿ ಲ್ಯಾಪ್‌ಟ್ಯಾಪ್‌ನಲ್ಲಿ ಟೈಪ್‌ಮಾಡಿ ಪ್ರಿಂಟ್ ತೆಗೆದು ನನ್ನ ಸಹಿ ಮಾಡಿಸಿಕೊಂಡಿರುತ್ತಾರೆ. ನಿಪಿ-2 ರ ಕಾಲಕ್ಕೆ ತನಿಖಾಧಿಕಾರಿಯು ಪೋಟೋಗಳನ್ನು ತೆಗೆಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಪೋಟೋಗಳನ್ನು ನಿಪಿ-3 ಮತ್ತು 4 ಎಂದು, ಸಿಡಿಯನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿತರು ನನ್ನನ್ನು ಬಡೆಯಲು ಬಳಸಿದ ಕಟ್ಟಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಎರಡು ಕಟ್ಟಿಗೆಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಟಾಟಾ ಎಸಿ ವಾಹನದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಟಾಟಾ ಎಸಿಯಲ್ಲಿ ಬಂದ 4 ಜನರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

( **ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ** ).

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

5. ಆರೋಪಿತರು ಸದರಿ ಟಾಟಾ ಎಸಿಯಲ್ಲಿ ಬಂದ ಸಮಯದಲ್ಲಿ ಏನಲೇ ವಾಲ್ಮೀಕಿ ಸೂಳೆ ಮಕ್ಕಳೇ ನಿಮ್ಮದು ಬಹಳ ಆಗಿದೆ ಇವತ್ತೇ ನಿಮ್ಮನ್ನು ಸಾಯಿಸುತ್ತೇನೆ ಎಂದು ಹೇಳಿದರು ಎಂದರೆ ಸರಿ. ಪೋಲೀಸರ ಮುಂದೆ ನಾನು ಮರುಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ ಆರ್ ಬಿ ಮತ್ತು ಎಸ್ ಆರ್ ಪಿ ವಕೀಲರಿಂದಃ**

6. ನಾನು ಈಗ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದೇನೆ. ನಾನು ಮಾರ್ಚ್ 2021 ರಲ್ಲಿ ಅಂತಿಮ ವರ್ಷದ ಪದವಿ ಓದುತ್ತಿದ್ದೆನು. ನನ್ನ ತಂದೆ ಆಟೋ ಚಾಲಕ. ಈ ದೂರಿನಲ್ಲಿ ವಿಳಾಸ ಕೊಟ್ಟ ನನ್ನ ಮನೆಯು ಬಾಡಿಗೆ ಮನೆಯಾಗಿರುತ್ತದೆ. ನಿಪಿ-1 ನ್ನು ಗಾಂಧಿನಗರ ಪೋಲೀಸ್ ಠಾಣೆಯಲ್ಲಿ ನಾನು ಹೇಳಿ ಟೈಪ್ ಮಾಡಿಸಿರುತ್ತೇನೆ. ಕೆ ಹೆಚ್ ಬಿ ಕಾಲೋನಿಗೂ ಮತ್ತು

ಕೆ ಇ ಬಿ ವೃತ್ತಕ್ಕೂ 2 ಕಿ.ಮೀ ದೂರ ಇದೆ ಎಂದರೆ ಸರಿ. ಆರೋಪಿತರೆಲ್ಲರೂ ಕೆ ಇ ಬಿ ಸರ್ಕಲ್ ನ ಹತ್ತಿರ ಇರುವ ಬಸವೇಶ್ವರ ನಗರದ ವಾಸಿಗಳು ಎಂದರೆ ಇಬ್ಬರು ಅಲ್ಲಿ ವಾಸವಾಗಿರುತ್ತಾರೆ ಮತ್ತು ಇಬ್ಬರು ಸಿದ್ದಾರ್ಥ ಕಾಲೋನಿ ಹಿಂದೆ ಬರುವ ಕೆನಾಲ್ ಆ ಕಡೆ ವಾಸ ಇರುತ್ತಾರೆ. ಕೆ ಹೆಚ್ ಬಿ ಕಾಲೋನಿಯಲ್ಲಿ ಇರುವ ಸಾರ್ವಜನಿಕ ಗಣೇಶ ವಿಸರ್ಜನೆಯನ್ನು ಕಪ್ಪಗಲ್ ರಸ್ತೆಯಲ್ಲಿರುವ ಕೆನಾಲ್‌ನಲ್ಲಿ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ. ಕೆಹೆಚ್‌ಬಿ ಕಾಲೋನಿಯ ಸಾರ್ವಜನಿಕ ಗಣಪತಿಗಳು ನೇರವಾಗಿ ಮೆರವಣಿಗೆ ಮೂಲಕ ಕಪ್ಪಗಲ್ ರಸ್ತೆಗೆ ತೆಗೆದುಕೊಂಡು ಬರುತ್ತಾರೆ ಎಂದರೆ ಸರಿ. ಕೆ ಇಬಿ ಸರ್ಕಲ್ ನಿಂದ ಬಸವೇಶ್ವರ ಸರ್ಕಲ್ ಕಡೆಯಿಂದ ಸಂಗನಕಲ್ಲು ರಸ್ತೆಯಲ್ಲಿ ಒಂದು ಕಾಲುವೆ ಬರುತ್ತದೆ ಎಂದರೆ ಸರಿ. ಸದರಿ ಕೆ ಇ ಬಿ ಸರ್ಕಲ್‌ನಿಂದ ನೇರವಾಗಿ ಸಂಗನಕಲ್ಲು ರಸ್ತೆಯಲ್ಲಿ ಇರುವ ಕೆನಾಲ್‌ನಲ್ಲಿ ಗಣೇಶ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ. ಕೆ ಹೆಚ್ ಬಿ ಕಾಲೋನಿಗೂ ಮತ್ತು ಕೆ ಇ ಬಿ ಸರ್ಕಲ್ ನಲ್ಲಿ ಸ್ಥಾಪಿಸಿದ ಗಣೇಶನ ಮಾರ್ತಿಗಳ ವಿಸರ್ಜನೆಗೆ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವ ಅವಶ್ಯಕತೆ ಕಂಡು ಬರುವುದಿಲ್ಲ ಎಂದರೆ ಸರಿ.

7. ಚರಣ್ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ದೂರಿಗಿನಲ್ಲಿ ಮೊದಲಿಗೆ ಚರಣ್ ಈತನ ಹೆಸರು ನಮೂದಿಸಿದ್ದೆನು. ಮರು ಹೇಳಿಕೆಯಲ್ಲಿ ಆತನನ್ನು ಕೈ ಬಿಡುವಂತೆ ನಾನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚರಣ್ ನನ್ನ ಅಣ್ಣ ಚಾಸಾ 7 ರವರ ಸ್ನೇಹಿತ ಎಂದರೆ ಸರಿಯಲ್ಲ. ಸದರಿ ಚರಣ್ ಆರೋಪಿತರ ಜೊತೆ ಗಲಾಟೆ ಮಾಡಿಕೊಂಡು ಅವರಿಗೆ ಹೊಡೆ ಬಡೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 7 ಮತ್ತು ಚರಣ್ ನ ಮೇಲೆ ದೂರು ಸಲ್ಲಿಸುತ್ತಾರೆ ಎಂದು ನಾನೇ ಮೊದಲಿಗೆ ಆರೋಪಿತರ ವಿರುದ್ದ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

8. ನನ್ನ ಎಡಗಣ್ಣಿನ ಹುಬ್ಬಿಗೆ ಆದ ಗಾಯದ ರಕ್ತವು ನನ್ನ ಬಟ್ಟೆ ಮೇಲೆ ಬಿದ್ದಿರುವುದಿಲ್ಲ. ನನ್ನ ಕೈಗೆ ಅಂಟಿದ ರಕ್ತವನ್ನು ನಾನು ತೊಳೆದುಕೊಂಡಿರುತ್ತೇನೆ.

ಸದರಿ ನನ್ನ ಕೈಗೆ ಅಂಟಿದ ರಕ್ತವನ್ನು ನಾನು ವೈದ್ಯರಿಗೆ ತೋರಿಸಿರುವುದಿಲ್ಲ. ಘಟನೆಯ ದಿನ ರಾತ್ರಿ 10-10 ಅಥವಾ 10-15 ರ ಸುಮಾರಿಗೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದ 10 ನಿಮಿಷದಲ್ಲಿ ವೈದ್ಯರು ನನ್ನನ್ನು ಪರೀಕ್ಷಿಸಿರುತ್ತಾರೆ. ನಮ್ಮ ಮನೆಯಿಂದ ಗಾಂಧಿನಗರ ಪೋಲೀಸ್ ಠಾಣೆಯು ಒಂದೂವರೆ - ಎರಡು ಕಿ. ಮೀ ಆಗುತ್ತದೆ ಎಂದರೆ ಸರಿ. ನಮ್ಮ ಮನೆಯಿಂದ ವಿಮ್ಸ್ ಆಸ್ಪತ್ರೆಯು 5 ಕಿ. ಮೀ ದೂರವಾಗುತ್ತದೆ. ನಾನು ರಾತ್ರಿ ಗಾಂಧಿನಗರ ಪೋಲೀಸ್ ಠಾಣೆಗೆ ಹೋದಾಗ ಬೆಳಿಗ್ಗೆ ಬರುವಂತೆ ಪೋಲೀಸರು ತಿಳಿಸಿದರು ಎನ್ನು ವ ಅಂಶವನ್ನು ನಿಪಿ-1 ರಲ್ಲಿ ನಮೂದಿಸಿಲ್ಲ.

9. ನಾನು ಮತ್ತು ಸ್ನೇಹಿತರು ಹಾಗೂ ನನ್ನ ಅಣ್ಣ ಹೇಗೆ ದೂರು ಕೊಡಬೇಕು ಎಂದು ಚರ್ಚಿಸಿದ್ದೆವು ಎಂದರೆ ಸರಿಯಲ್ಲ. ಅನಿಲ್ ಎನ್ನುವ ಬಿಜೆಪಿ ವ್ಯಕ್ತಿಯು ನನಗೆ ಪರಿಚಯ ಎಂದರೆ ಸರಿ. ನಾನೂ ಸಹ ಬಿಜೆಪಿ ಪಕ್ಷದ ಕಾರ್ಯ ಕರ್ತ ಎಂದರೆ ಸರಿಯಲ್ಲ. ನಾನೂ ಸಹ ಬಿಜೆಪಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇನೆ ಎಂದರೆ ಸರಿಯಲ್ಲ.

10. ಆರೋಪಿತರು ಎಲ್ಲರೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಎಂದರೆ ನನಗೆ ಗೊತ್ತಿಲ್ಲ. ಅನಿಲ್‌ರವರ ಹೇಳಿಕೆ ಕೇಳಿಕೊಂಡು ಆರೋಪಿತರ ಮೇಲೆ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಾನು ಮೇಲೆ ಹೇಳಿದ ದಿನದಂದು ನನ್ನ ಜೊತೆ ಗಲಾಟೆ ಮಾಡಿಕೊಂಡಿಲ್ಲ ಮತುತ ಗಣಪತಿ ವಿಸರ್ಜನೆಯ ಬಳಿ ನಮ್ಮ ಬಗ್ಗೆ ಚರ್ಚೆ ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಯಾವುದೇ ರೀತಿಯ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಟಾಟಾ ಎಸಿ ಯಲ್ಲಿ ಸ್ಥಳಕ್ಕೆ ಬಂದಿಲ್ಲ ಮತ್ತು ಮು ಮಾ 1 ಮತ್ತು 2 ರಿಂದ ನಮ್ಮನ್ನು ಹೊಡೆದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರಂತಹ ಬಡಿಗೆಗಳು ಕಟ್ಟಡ ಕಟ್ಟಲು ಬಳಸುವ ಬಡಿಗೆಗಳು ಎಂದರೆ ಸರಿ. ಮು ಮಾ 1 ಮತ್ತು 2 ರ ಕಟ್ಟಿಗೆಗಳಿಂದ ನಮ್ಮ ಮೇಲೆ ಹಲ್ಲೆ ಮಾಡಿದ ಕಟ್ಟಿಗೆಗಳು ಎಂದು ತೋರಿಸಲು ವಿಶೇಷ ಕುರುಹುಗಳು ಇಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಮರು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕೆಳಗೆ ಬಿದ್ದು

ಕಣ್ಣಿಗೆ ಗಾಯಪಡಿಸಿಕೊಂಡಿದ್ದನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ಮೇಲೆ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**